ದೀರ್ಘಾವಧಿಯಲ್ಲಿ ಕುಡಿಯಲು ಯೋಗ್ಯವಲ್ಲ ಎಂದು ತಿಳಿದು ಬಂದಿದೆ. ವಿವರಗಳನ್ನು ಇದರೊಡನೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಕೋಲಾರ ಜಿಲ್ಲೆಯಲ್ಲಿ ಸಂಗ್ರಹಿಸಲಾದ 106 ನೀರಿನ ಮಾದರಿಗಳ ಪೈಕಿ ಫ್ಲೋರೈಡ್ ಅಂಶದ ಬಗ್ಗೆ ತಾಲ್ಲೂಕುವಾರು ವಿವರಗಳು

ತಾಲ್ಲೂಕು	ನೀರಿನ ಮಾದರಿ ಸಂಖ್ಯೆ	ಫ್ಲೋರೈಡ್ ಅಂಶ (ಪಿಪಿಎಂ) 1 ರಿಂದ 15 (ಸಂಖ್ಯೆ)	1.5 ರಿಂದ 6 (ಸಂಖ್ಯೆ)
1. ಕೋಲಾರ	24	17	7
2. ಮುಳುಬಾಗಿಲು	7	5	2
3. ಚಿಕ್ಕಬಳ್ಳಾಪುರ	9	9	-
4. ಶ್ರೀನಿವಾಸಪುರ	15	12	3
5. ಚಿಂತಾಮಣಿ	8	5	3
6. ಬಂಗಾರಪೇಟೆ	5	2	3
7. ಶಿಡ್ಲಘಟ್ಟ	4	3	1
8. ಬಾಗೇಪಲ್ಲಿ	21	6	15
9. ಮಾಲೂರು	-	-	-
10. ಗೌರಿಬಿದನೂರು	10	4	6
11. ಗುಡಿಬಂಡೆ	3	1	2
ಒಟ್ಟು	106	64	42

ವಿಷಯ : ವಿಜಾಪುರ ನಗರದ ಒಳಚರಂಡಿ ಮತ್ತು ನೀರು ಒದಗಿಸುವ ವ್ಯವಸ್ಥೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 735 (765)

ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ವಿಜಾಪುರ ನಗರದ ಒಳಚರಂಡಿ ಮತ್ತು ಕುಡಿಯುವ ನೀರಿನ ಅವ್ಯವಸ್ಥೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ. ಬೆಳೆಯುತ್ತಿರುವ ನಗರದ ಹೊರವಲಯದ ಒಳಚರಂಡಿ ಯೋಜನೆಗೆ ವಿಶೇಷ ಹಣ ಒದಗಿಸಿದೆಯೇ? ಹಾಗಿದ್ದಲ್ಲಿ ಎಷ್ಟು?

ಇ. ನಗರದ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ ಮುಗಿದಾಗ ಒಳಪೈಪ್ ಲೈನ್ ವ್ಯವಸ್ಥೆ ದುರ್ಬಲವಾಗಿದ್ದು ಅದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು):

ಅ. ವಿಜಾಪುರ ನಗರದ ಒಳಚರಂಡಿ ವ್ಯವಸ್ಥೆಯ ಉಸ್ತುವಾರಿಯನ್ನು ನಗರಸಭೆ ನಿರ್ವಹಿಸುತ್ತಿದೆ. ಈ ಒಳಚರಂಡಿ ವ್ಯವಸ್ಥೆಯನ್ನು ಉತ್ತಮಗೊಳಿಸಲು ಯಾವ ಪ್ರಸ್ತಾವನೆಯು ಇರುವುದಿಲ್ಲ.

ನೀರು ಸರಬರಾಜಿನ ಉಸ್ತುವಾರಿಯನ್ನು ಜಲಮಂಡಲಿ 2-10-93ರಿಂದ ನಿರ್ವಹಿಸುತ್ತಿದೆ. ಸಧ್ಯದಲ್ಲಿ ಎರಡು ದಿನಗಳಿಗೊಮ್ಮೆ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಆ. ಒದಗಿಸಿಲ್ಲ.

ಇ. ಈ ಬಗ್ಗೆ ವಿವರವಾದ ಸಮೀಕ್ಷೆ ನಡೆಸಿದ ನಂತರ ಪ್ರತ್ಯೇಕ ಯೋಜನೆಯನ್ನು ತಯಾರಿಸಲಾಗುವುದು.

ವಿಷಯ : ರಾಜ್ಯದಲ್ಲಿ ಕೈಗಾರಿಕಾ ಹಿಂದುಳಿದ ಪ್ರದೇಶಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 736 (849)

ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ ಕೈಗಾರಿಕೆಗಳ ಹಿಂದುಳಿದ ಪ್ರದೇಶಗಳೆಂದು ಜಿಲ್ಲೆಗಳನ್ನು ಸಾರಲಾಗಿದೆಯೆ ?

ಆ. ಹಾಗಿದ್ದಲ್ಲಿ ಆ ಜಿಲ್ಲೆಗಳು ಯಾವುವು ?

ಇ. ಕೈಗಾರಿಕಾ ಹಿಂದುಳಿದ ಪ್ರದೇಶಗಳ ಉತ್ತೇಜನಕ್ಕಾಗಿ ಸರ್ಕಾರದ ನೀತಿಯೇನು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ. 1993ರ ಕೈಗಾರಿಕಾ ನೀತಿಯಂತೆ ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದಕ್ಷಿಣ ತಾಲ್ಲೂಕು ಹಾಗೂ 1990ರ ಜನಗಣತಿಯಂತೆ ಬೆಂಗಳೂರು ಅರ್ಬನ್ ಅಗ್ಲಾಮರೇಷನ್ ಪ್ರದೇಶವನ್ನು ಹೊರತುಪಡಿಸಿ ರಾಜ್ಯದ ಉಳಿದ 173 ತಾಲ್ಲೂಕುಗಳನ್ನು ಅಭಿವೃದ್ಧಿ ಹೊಂದುತ್ತಿರುವ ಪ್ರದೇಶವೆಂದು ಸಾರಲಾಗಿದೆ.

ಆ. ಕೈಗಾರಿಕಾ ಹಿಂದುಳಿದ ಪ್ರದೇಶಗಳ ಉತ್ತೇಜನಕ್ಕಾಗಿ ಸರ್ಕಾರದವರು ಈ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ ಬೇಕಾದ ಅಭಿವೃದ್ಧಿಪಡಿಸಿದ ಭೂಮಿ ವಿದ್ಯುಚ್ಛಕ್ತಿ ನೀರು ಮುಂತಾದ ಮೂಲಭೂತ ಸೌಲಭ್ಯಗಳ ಜೊತೆಗೆ 1993ರ ಪ್ರೋತ್ಸಾಹ ಕ್ರಮಗಳು ಹಾಗೂ ರಿಯಾಯಿತಿಗಳನ್ವಯ ಸಹಾಯ ಧನ ವಾಣಿಜ್ಯ ತೆರಿಗೆ ವಿನಾಯಿತಿ ಮುಂತಾದ ಸಹಾಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಇದಲ್ಲದೆ ಈ ಪ್ರದೇಶಗಳಲ್ಲಿ ಕೈಗಾರಿಕಾ ಸ್ಥಾಪನೆಗಾಗಿ ಮುಂದೆ ಬರುವಂತೆ ಮಾಡಲು ಕೈಗಾರಿಕಾ ವಿಚಾರ ಸಂಕೀರ್ಣ ಹಾಗೂ ವಸ್ತು ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ ಮತ್ತು ಸ್ಥಳೀಯ ವಿದ್ಯಾವಂತ ನಿರುದ್ಯೋಗಿಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂಬರುವಂತೆ ಮಾಡಲು ಉದ್ಯಮಶೀಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.